# ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ.

**ಸಿಸಿ ನಂಬರ 357/2015**

ಆರೋಪಿಯ ಹೆಸರುಃ ಲಕ್ಷ್ಮಣ
ತಂದೆ ಹೆಸರುಃ ಚುಡಿಯಾ ನಾಯ್ಕ
ವಯಸ್ಸುಃ
ಉದ್ಯೋಗಃ ವ್ಯವಹಾರ
ವಿಳಾಸಃ ಸಾಃ ಬೊಬ್ರುವಾಡಾ, ಅಂಕೋಲಾ ತಾಲೂಕ

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆ

ಪ್ರ 1: ನೀವು ಅಭಿಯೋಜನೆ ಪರ ಸಾಕ್ಷ್ಯವನ್ನು ಕೇಳಿದ್ದೀರಾ?
ಉತ್ತರಃ

ಪ್ರ 2: ಫ್ರಾಸಾ-1 ಮಾಧವ ಬಾಬು ನಾಯಕ ಇವರು ತಮ್ಮ ಸಾಕ್ಷಿಯಲ್ಲಿ ಚಾಸಾ-4 ರವರ ಪರಿಚಯವಿರುತ್ತದೆ. ದಿಃ09-04-2014 ರಂದು ತಾನು ಒಂದು ಹೆರಾಯಿನ್ ಹಿಡಿದಂತಹ ಪ್ರಕರಣದಲ್ಲಿ ಶೀಲಾ ಲಕ್ಷ್ಮಣ ನಾಯಕ ಇವರು ಆರೋಪಿಯಾಗಿದ್ದ ಪ್ರಕರಣದಲ್ಲಿ ಪಂಚರಾಗಿದ್ದು, ಅದಕ್ಕೆ ಸಂಬಂಧಿತವಾಗಿ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಿದ್ದಾಗ ನ್ಯಾಯಾಲಯದ ವರಾಂಡಾದಲ್ಲಿ ಆ ಪ್ರಕರಣದ ಆರೋಪಿಯಾದ ಶೀಲಾ ಇವರ ಗಂಡನಾದ ಆರೋಪಿ ಲಕ್ಷ್ಮಣ ಚುಡಿಯಾ ನಾಯಕ ಇವರು ತನ್ನನ್ನು ನೋಡಿದ ಕೂಡಲೇ ಅವಾಚ್ಯ ಶಬ್ದಗಳಿಂದ ಬೈದು, ಬೋಳಿ ಮಗನೇ ನೀವು ಏನಾದರೂ ಪಂಚನಾಮೆಗೆ ಸಾಕ್ಷಿ ಹೇಳಲು ಹೋದರೆ ನಿನ್ನನ್ನು ಕೊಲೆ ಮಾಡಿ ಮುಗಿಸಿ ಬಿಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ನಂತರ ತಾನು ಅದೇ ದಿನ ಮಾನ್ಯ ನ್ಯಾಯಾಲಯದ ಮುಂದೆ ಮಾನ್ಯ ನ್ಯಾಯಾಧೀಶರ ಮುಂದೆ ಈ ವಿಚಾರವಾಗಿ ಲಿಖಿತವಾದ ದೂರನ್ನು

ಕೊಟ್ಟಿರುತ್ತೇನೆ. ಆರೋಪಿಯು ತನಗೆ ಬೈದಾಗ ಮಧ್ಯಾಹ್ನ 1.55 ಗಂಟೆಯ ಆಗಿತ್ತು. ನಂತರ ತಾನು ಆ ಪ್ರಕರಣಕ್ಕೆ ಪಂಚನಾಮೆಗೆ ಸಂಬಂಧಪಟ್ಟು ಸಾಕ್ಷಿ ಹೇಳಿ ಹೋಗಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 3: ಫ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷಿಯಲ್ಲಿ ನಂತರ 3-4 ತಿಂಗಳುಗಳ ನಂತರ ಆಗಸ್ಟ್ ತಿಂಗಳಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟು ನ್ಯಾಯಾಲಯದ ವರಾಂಡಾದಲ್ಲಿ ಪಂಚನಾಮೆಯನ್ನು ಜರುಗಿಸಲಾಯಿತು. ತಾನು ಪೊಲೀಸರಿಗೆ ಸ್ಥಳವನ್ನು ತೋರಿಸಿರುತ್ತೇನೆ. ತನಗೆ ಅವಾಚ್ಯ ಶಬ್ದಗಳಿಂದ ಬೈದಿರುವ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 4: ಫ್ರಾಸಾ-2 ರಾಘು ಅಶೋಕ ನಾಯ್ಕ ಇವರು ತಮ್ಮ ಸಾಕ್ಷಿಯಲ್ಲಿ ಚಾಸಾ-3 ರವರ ಪರಿಚಯ ಇರುತ್ತದೆ. ದಿಃ22-08-2014 ರಂದು ಅಂಕೋಲಾ ಪಿ ಎಸ್ ಐ (ಚಾಸಾ-7) ರವರು ಅಂಕೋಲಾ ನ್ಯಾಯಾಲಯದ ಆವರಣದಲ್ಲಿ ಪಂಚನಾಮೆಗೆಂದು ಬರಲು ತಿಳಿಸಿರುತ್ತಾರೆ. ಆ ಸಮಯದಲ್ಲಿ ತಾನು, ಚಾಸಾ-1 ಮತ್ತು 3 ರವರು ಇದ್ದೇವು. ಚಾಸಾ-1 ರವರು ಪಿ ಎಸ್ ಐ ಇವರಿಗೆ ಘಟನೆಯ ವಿಚಾರವಾಗಿ ವಿವರಿಸುತ್ತಿದ್ದರು. ನಂತರ ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 5: ಫ್ರಾಸಾ-3 ಸಂದೇಶ ಮಂಗೇಶ ನಾಯ್ಕ ಇವರು ತಮ್ಮ ಸಾಕ್ಷಿಯಲ್ಲಿ ಚಾಸಾ-2 ರವರ ಪರಿಚಯ ಇರುತ್ತದೆ. 2014 ರಲ್ಲಿ ಪಂಚನಾಮೆಯನ್ನು ನ್ಯಾಯಾಲಯದ

ಆವರಣದಲ್ಲಿ ಬೆಳಿಗ್ಗೆ 11 ರಿಂದ 12 ಗಂಟೆಯ ಅವಧಿಯಲ್ಲಿ ಮಾಡಿರುತ್ತಾರೆ. ಆ ಸಮಯದಲ್ಲಿ ತಾನು, ಚಾಸಾ-1 ಮತ್ತು 2 ರವರು ಇದ್ದೇವು. ಚಾಸಾ-1 ರವರಿಗೆ ಆರೋಪಿಯ ಅವಾಚ್ಯ ಶಬ್ದಗಳಿಂದ ಬೈದಿದ್ದರ ವಿಷಯವಾಗಿ ಪಂಚನಾಮೆಯನ್ನು ಮಾಡಿರುತ್ತಾರೆ. ಮತ್ತೆ ಏನನ್ನೂ ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 6: ಪ್ರಾಸಾ-6 ಸಂತೋಷ ದಾಮೋದರ ಮಾಳಸೇಕರ ರವರು ತಮ್ಮ ಸಾಕ್ಷಿಯಲ್ಲಿ ದಿಃ09-04-2014 ರಂದು ತಾನು ಮತ್ತು ಚಾಸಾ-1 ರವರು ನ್ಯಾಯಾಲಯಕ್ಕೆ ಬಂದಿರುತ್ತೇವೆ. ಚಾಸಾ-1 ರವರು ನ್ಯಾಯಾಲಯದಲ್ಲಿ ಕೆಲಸ ಇದ್ದಿದ್ದರಿಂದ ಬಂದಿದ್ದರು. ಹೊರಗಡೆ ಬೈಯುತ್ತಿದ್ದರು, ಆದರೆ ನಂತರ ಆರೋಪಿ ಎಂದು ಗೊತ್ತಾಗಿರುತ್ತದೆ. ಆರೋಪಿ ಮಧ್ಯ ಚಾಸಾ-1 ರವರ ಮಧ್ಯ ಹಿಂದೆ ಯಾವುದಾದರೂ ಡ್ರಗ್ಸ ಪ್ರಕರಣ ವಿಷಯವಾಗಿ ಚಾಸಾ-1 ರವರ ವಿರುದ್ಧ ಸಾಕ್ಷಿ ಹೇಳಲು ಬಂದಿದ್ದರಿಂದ ಅವರಿಗೆ ಬೈಯುತ್ತಿದ್ದರು. ನಂತರ ಚಾಸಾ-1 ರವರು ಠಾಣೆಯಲ್ಲಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಅವಾಚ್ಯ ಶಬ್ದಗಳಿಂದ ಆರೋಪಿ ಬೈದಿರುತ್ತಾನೆ ಎಂದು ಪ್ರಕರಣ ಮಾಡಿದ್ದರು. ಗಲಾಟೆಯಾದಾಗ ಮಧ್ಯಾಹ್ನ 1.55 ಗಂಟೆಯಾಗಿತ್ತು. ಆ ದಿನ ಯಾವ ವಿಚಾರಕ್ಕಾಗಿ ಗಲಾಟೆಯಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ವಿಷಯವಾಗಿ ತಾನು ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 7: ಫ್ರಾಸಾ-7 ಕುಮಾರ ಗುಂಡಪ್ಪ ಹಾರ್ಡಕರ, ಪಿಎಸ್ಐ ರವರು ತಮ್ಮ ಸಾಕ್ಷಿಯಲ್ಲಿ ದಿಃ 21-08-2014 ರಂದು ಮಾನ್ಯ ಜೆ ಎಂ ಎಫ್ ಸಿ ನ್ಯಾಯಾಲಯ ಅಂಕೋಲಾದಿಂದ ಬಂದಂತಹ ಖಾಸಗಿ ದೂರ ನಂ. 5/2014 ನೇದ್ದನ್ನು ಪಿ ಐ ಅಂಕೋಲಾ ಇವರು ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲು ಅನುಮತಿ ನೀಡಿದಂತೆ, ಅದೇ ದಿನ ಸಂಜೆ 7.15 ಗಂಟೆಗೆ ಸ್ವೀಕರಿಸಿಕೊಂಡು, ಠಾಣಾ ಗುನ್ನಾ ನಂ.165/2014 ಕಲಂ.504, 506 ನೇದ್ದರ ಅಡಿಯಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಪ್ರಥಮ ವರ್ತಮಾನ ವರದಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿಃ22-08-2014 ರಂದು ತನಿಖೆಯನ್ನು ಮುಂದುವರೆಸಿ, ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಚಾಸಾ-1 ರವರು ತೋರಿಸಿದಂತೆ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಜರುಗಿಸಿರುತ್ತೇನೆ. ನಂತರ ಫಿರ್ಯಾದಿಯ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿಃ25-08-2014 ರಂದು ಆರೋಪಿಯು ತನಿಖೆಗೆ ಹಾಜರುಪಡಿಸಿ, ವಿಚಾರಣೆ ಮಾಡಲು ಹುಡುಕಾಡಿದ್ದು, ಆದರೆ ಆತನು ಸಿಕ್ಕಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 8: ಫ್ರಾಸಾ-7 ರವರು ತಮ್ಮ ಮುಂದುವರೆದ ಸಾಕ್ಷಿಯಲ್ಲಿ ದಿಃ 14-01-2015 ರವರೆಗೆ ಆರೋಪಿಯು ಸಿಗದೇ ಇರುವ ಕಾರಣ ಹಾಗೂ ಆತನು ತನಿಖೆಗೆ ಹಾಜರಾಗದೇ ಇದ್ದ ಕಾರಣ ಹಾಗೂ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಕಂಡುಬಂದಿದ್ದರಿಂದ ಆರೋಪಿಯ ವಿರುದ್ಧ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿಯನ್ನು ಗುರುತಿಸುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರ 9: ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೆ?

**ಉತ್ತರಃ**

ಪ್ರ 10: ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೆಯೇ?

**ಉತ್ತರಃ**

( ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಆತನಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 03-01-2026

**(ಅರ್ಪಿತ ಬಿ ಬೆಲ್ಲದ)**

**ಪ್ರಭಾರ ಹೆ. ಪ್ರ ದ ನ್ಯಾದಂ, ಅಂಕೋಲಾ.**